# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 502 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 24-09-2020 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ವಿವಿಧ ವರ್ಗಗಳ ಪರವಾನಗಿಯಿಂದ/ಅಬಕಾರಿ ಗುತ್ತಿಗೆದಾರರಿಂದ ಹಾಗೂ ಡಿಸ್ಟಿಲರಿಗಳಿಂದ ಅಬಕಾರಿ ಇಲಾಖೆಗೆ ಬರಬೇಕಾಗಿರುವ ಬಾಕಿ ತೆರಿಗೆ ಹಣವೆಷ್ಟು: (ಡಿಸ್ಟಿಲರಿವಾರು/ ಕಂಪನಿವಾರು/ಇವುಗಳ ಮಾಲೀಕರು/ ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರವು ದಿನಾಂಕ: 01-07-2007 ರಿಂದ ರಾಜ್ಯಾದ್ಯಂತ ಸಾರಾಯಿ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸಿ ಅಬಕಾರಿ ಗುತ್ತಿಗೆ ನೀಡುವುದನ್ನು ರದ್ದುಗೊಳಿಸಲಾಗಿರುವುದರಿಂದ 3 ವರ್ಷಗಳಿಂದ ಅಬಕಾರಿ ಗುತ್ತಿಗೆಯಿಂದ ಬರಬೇಕಾಗಿರುವ ಬಾಕಿ ಯಾವುದೂ ಇರುವುದಿಲ್ಲ.<br><br>ಡಿಸ್ಟಿಲರಿಗಳಿಂದ ಮದ್ಯ ಪಾನೀಯಗಳನ್ನು ರವಾನೆ ಮಾಡುವ ಪೂರ್ವದಲ್ಲಿಯೇ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಪಾವತಿಸಿಕೊಂಡ ನಂತರವೇ ಕರ್ನಾಟಕ ರಾಜ್ಯ ಪಾನೀಯ ನಿಗಮದ ಡಿಪೋಗಳಿಗೆ ಮದ್ಯದ ಸರಕನ್ನು ಕಳುಹಿಸಲಾಗುತ್ತಿರುವುದರಿಂದ ಅಬಕಾರಿ ಸುಂಕವನ್ನು ಬಾಕಿ ಉಳಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ) | ಈ ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣವನ್ನು ಇಲ್ಲಿಯವರೆಗೂ ವಸೂಲು ಮಾಡದಿರಲು ಕಾರಣವೇನು: ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ಎಷ್ಟು ವರ್ಷಗಳಿಂದ ಬಾಕಿ ಇಟ್ಟುಕೊಂಡಿದ್ದಾರೆ. (ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಇ) | ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣವನ್ನು ಎಷ್ಟು ದಿವಸಗಳಲ್ಲಿ ವಸೂಲು ಮಾಡಲಾಗುವುದು: (ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಈ) | ಈ ಹಿಂದೆ ಅಬಕಾರಿ ಇಲಾಖೆಯಿಂದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಪ್ರಕರಣಗಳಿರುವ ಅಂಶವನ್ನು ಅಬಕಾರಿ ಇಲಾಖೆಯ ಆಯುಕ್ತರು ಸ್ಪಷ್ಟಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಅಂತಹ ಪ್ರಕರಣಗಳು ಎಷ್ಟಿವೆ? (ಸಂಪೂರ್ಣ ವಿವರ ನೀಡುವುದು) | ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಪ್ರಕರಣಗಳಿರುವ ಅಂಶವನ್ನು ಅಬಕಾರಿ ಇಲಾಖೆಯ ಆಯುಕ್ತರು ಸ್ಪಷ್ಟಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಬಾಕಿಯಿರುವ ಪ್ರಕರಣಗಳು 1946-47ನೇ ಸಾಲಿನಿಂದ 2004-05ನೇ ಸಾಲಿನ ಸಾರಾಯಿ/ಶೇಂದಿ ಗುತ್ತಿಗೆಗೆ ಸಂಬಂಧಿಸಿದ್ದು, ದಿನಾಂಕ:01-07-2007 |

| | | |
|---|---|---|
| | | ರಿಂದ ರಾಜ್ಯಾದ್ಯಂತ ಸಾರಾಯಿ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸಲಾಗಿರುತ್ತದೆ. ಆ ನಂತರದಿಂದ ಯಾವುದೇ ಸಾರಾಯಿ/ಶೇಂದಿ ವಹಿವಾಟು ಇಲ್ಲದ ಕಾರಣ ಮುಂದಿನ ವರ್ಷಗಳಲ್ಲಿ ಬಾಕಿ ಮೊತ್ತದ ಪ್ರಶ್ನೆ ಉದ್ಭವವಾಗುವುದಿಲ್ಲ.<br><br>ಬಾಕಿ ಉಳಿದಿರುವ ಅಸಲಿಗೆ ಸಂಬಂಧಪಟ್ಟಂತೆ ವಾರ್ಷಿಕವಾಗಿ ಅಸಲಿನ ಮೇಲೆ ಶೇ.15ರಷ್ಟು ಬಡ್ಡಿ ವಿಧಿಸುವ ಕ್ರಮ ಹಾಲಿ ಜಾರಿಯಲ್ಲಿರುತ್ತದೆ.<br><br>ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಶಿಫಾರಸ್ಸಿನಂತೆ ಸರ್ಕಾರವು ಬಾಕಿ ವಸೂಲಾತಿಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿದ್ದು ಸಮಿತಿಯ ವರದಿಯನ್ನಾಧರಿಸಿ ಬಾಕಿ ವಸೂಲಾತಿ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಸರ್ಕಾರವು 2016-17ನೇ ಸಾಲಿನಲ್ಲಿ ಜಾರಿಗೆ ತಂದಿದ್ದ ಕರಸಮಾಧಾನ ಯೋಜನೆ-4 ರಡಿ ರಾಜ್ಯಾದ್ಯಂತ ಒಟ್ಟು ರೂ.41.89 ಕೋಟಿಗಳ ಅಸಲು ಮೊತ್ತ ವಸೂಲಾಗಿದ್ದು, ಅದಕ್ಕೆ ಅನ್ವಯಿಸುವ ಬಡ್ಡಿ ಹಣವನ್ನು ಮನ್ನಾ ಮಾಡಲಾಗುತ್ತಿದೆ.<br><br>ದಿನಾಂಕ: 31.03.2020 ರ ಅಂತ್ಯಕ್ಕೆ 644 ಪ್ರಕರಣಗಳಲ್ಲಿ ಅಸಲು ರೂ.173.51 ಕೋಟಿ ಮತ್ತು ಬಡ್ಡಿ ರೂ.588.21 ಕೋಟಿ ಸೇರಿ ಒಟ್ಟು ರೂ. 761.73 ಕೋಟಿ ಬಾಕಿ ಇರುತ್ತದೆ. |

ಆಇ 78 ಇಎಲ್‌ಕ್ಯೂ 2020

(ಹೆಚ್ ನಾಗೇಶ್)
ಅಬಕಾರಿ ಸಚಿವರು